ಒ ಎಸ್ ನಂ.  78/2019

ಡಿ ಡಬ್ಲ್ಯೂಃ  1

ದಿನಾಂಕಃ 25-09-2024

ಈ ದಿನದಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ  ಕೆ ಎಸ್ ಎಚ್  ವಾದಿಯರ ಪರ ವಕೀಲರಿಂದ**

ವಾದಿಯರು ಹಿತ್ತಲ ಖಾಲಿ ಜಾಗ ನಂ.590 ರ ಕುರಿತು ದಾವೆ ಸಲ್ಲಿಸಿದ್ದಾರೆ. ಸದರಿ ಆಸ್ತಿಯು ಪೂರ್ವ-ಪಶ್ಚಿಮ 25 ಅಡಿ, ಉತ್ತರ-ದಕ್ಷಿಣ 50 ಅಡಿ ಇದೆ. ದಾವಾ ಆಸ್ತಿಯ ಪೂರ್ವಕ್ಕೆ - ಶಿವರುದ್ರಯ್ಯ ಹಿರೇಮಠ ರವರ ಖಾಲಿ ಜಾಗ,  ಪಶ್ಚಿಮಕ್ಕೆ - 6 ಅಡಿ ದಾರಿ ,  ಉತ್ತರಕ್ಕೆ - ನಮ್ಮ ಖಾಲಿ ಜಾಗ, ದಕ್ಷಿಣಕ್ಕೆ- ಬಾಸ್ಕರಪ್ಪ ಕುಂದನಗಾರ ರವರ ಹಿತ್ತಲದ ಆಸ್ತಿ ಇವೆ. ದಾವಾ ಆಸ್ತಿಯ ದಕ್ಷಿಣಕ್ಕೆ  ಬಾಸ್ಕರಪ್ಪ ಕುಂದನಗಾರ ರವರ ಹಿತ್ತಲದ ಆಸ್ತಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ  ಎಂದರೆ  ಸರಿಯಲ್ಲ. ದಕ್ಷಿಣಕ್ಕೆ ನಮಗೆ ಸೇರಿದ ಖಾಲಿ ಜಾಗ ಇದೆ ಎಂದರೆ ಸರಿಯಲ್ಲ.  ದಾವಾ ಆಸ್ತಿಯ ಉತ್ತರಕ್ಕೆ  ರಸ್ತೆ ಇದೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ನಂತರ  ರಸ್ತೆ ಇದೆ. ದಾವಾ ಆಸ್ತಿಯು ಚನ್ನಮಲ್ಲಯ್ಯ ಹಿರೇಮಠ ರವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ, ನಾವು  ಖರೀಧಿಸಿದ ಆಸ್ತಿ . ವಾದಿಯರ ಮತ್ತು ನಮ್ಮ ಕುಟುಂಬ ಬೇರೆ ಬೇರೆ ಎಂದರೆ ಸರಿಯಲ್ಲ. ಸಂಬಂಧದಲ್ಲಿ ಅಣ್ಣ-ತಮ್ಮಂದಿರು. ಅಂದರೆ, ನಮ್ಮ ಅಜ್ಜ ಮತ್ತು ವಾದಿಯರ ಅಜ್ಜ ಖಾಸ ಅಣ್ಣತಮ್ಮಂದಿರು. ನಮ್ಮ ಮತ್ತು ವಾದಿಯರ ಮಧ್ಯೆ ಸಂಬಂಧ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ  ಎಂದರೆ  ಸರಿಯಲ್ಲ.  ನಮ್ಮ ಅಜ್ಜ ಮತ್ತು ವಾದಿಯರ ಅಜ್ಜ ಖಾಸ ಅಣ್ಣತಮ್ಮಂದಿರು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡೆಸಿರುತ್ತೇವೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸದೆ ಇದ್ದರೂ ಸಹ, ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ  ಎಂದರೆ  ಸರಿಯಲ್ಲ.

ಚನ್ನಮಲ್ಲಯ್ಯ ಹಿರೇಮಠ ರವರು ಯಾವ ವರ್ಷದಲ್ಲಿ ಮೃತ ಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಚನ್ನಮಲ್ಲಯ್ಯ ಹಿರೇಮಠರವರು  ಸನ್ 2004 ರಲ್ಲಿ  ಪೌತಿಯಾಗುವವರೆಗೂ ದಾವಾ ಆಸ್ತಿಯೂ ಅವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ.  1993 ರಲ್ಲಿಯೇ ನಾವು ಖರೀದಿದ್ದೇವೆ. ದಾವಾ ಆಸ್ತಿಯನ್ನು 1993 ರಲ್ಲಿಯೇ ಚನ್ನಮಲ್ಲಯ್ಯ ಹಿರೇಮಠ ರವರಿಂದಲೇ ಖರೀದಿಸಿದ್ದೇವೆ. ದಾವಾ ಆಸ್ತಿಯನ್ನು ಚನ್ನಮಲ್ಲಯ್ಯ ಹಿರೇಮಠ ರವರಿಂದ ಖರೀದಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ  ಎಂದರೆ  ಸರಿಯಲ್ಲ. ಚನ್ನಮಲ್ಲಯ್ಯ ಹಿರೇಮಠ ರವರು ನನಗೆ ವಿ ಪಿ ಸಿ ನಂ.589 ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ

ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ದಿ.12-10-1987 ರಂದು ಚನ್ನಮಲ್ಲಯ್ಯ ಹಿರೇಮಠ ರವರು ವಿ ಪಿ ಸಿ ನಂ.589 ಹಿತ್ತಲ ಜಾಗೆಯನ್ನು ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ವಿ ಪಿ ಸಿ ನಂ.589 ಆಸ್ತಿಗಳು ಮೂಲತಃ ಚನ್ನಮಲ್ಲಯ್ಯ ಹಿರೇಮಠ ರವರ ಆಸ್ತಿಗಳು ಎಂದರೆ ಸರಿಯಲ್ಲ. ವಿ ಪಿ ಸಿ ನಂ.589 ಮೂಲತಃ ನಮ್ಮ ಆಸ್ತಿ.

ಸದರಿ ಎರಡೂ ಆಸ್ತಿಗಳು ಮೂಲತಃ ಒಂದೇ ಆಸ್ತಿಯಾಗಿದ್ದು, ಅದಕ್ಕೆ ಪರಡಿ ನಂ.54 ಎಂದು ಶಿರೋಳ ಮಂಡಳ ಪಂಚಾಯತಿಯ ದಾಖಲೆಗಳನ್ನು ನಮೂದಿಸಲಾಗಿತ್ತು ಎಂದರೆ ಸರಿ. ಪರಡಿ ನಂ.54 ರ ಪೈಕಿ ಉತ್ತರದ ಕಡೆಗೆ ಪೂರ್ವ-ಪಶ್ಚಿಮ 25 ಪೂಟ್, ದಕ್ಷಿಣ-ಉತ್ತರ 30 ಪೂಟ್ ಆಸ್ತಿಯನ್ನು ಚನ್ನಮಲ್ಲಯ್ಯ ಹಿರೇಮಠ ರವರು ನನ್ನ ತಂದೆ-ರುದ್ರಯ್ಯ ರವರಿಗೆ ರೂ.1500/- ಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಖರೀದಿಸಿದ ಆಸ್ತಿಗೆ ಪಂಚಾಯತಿ ದಾಖಲೆಗಳಿಗೆ ವಿ ಪಿ ಸಿ ನಂ.589 ಎಂದು ದಾಖಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ಖರೀಧಿಯ ವ್ಯವಹಾರದ ನಂತರ, ಪರಡಿ ನಂ.54 ನ್ನು ರದ್ದು ಪಡಿಸಿ, ವಿ ಪಿ ಸಿ ನಂ. 589 ಮತ್ತು 590 ಎಂದು ಪಂಚಾಯತಿಯಲ್ಲಿ ದಾಖಲಿಸಲಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ವಿ ಪಿ ಸಿ ನಂ. 589 ರ ದಾಖಲೆಗಳಿಗೆ ನಮ್ಮ ತಂದೆಯ ಹೆಸರು ಮತ್ತು 590 ದಾಖಲೆಗಳಿಗೆ ಚನ್ನಮಲ್ಲಯ್ಯ ಹಿರೇಮಠ ರವರ ಹೆಸರು ದಾಖಲಾಗಿರುತ್ತವೆ ಎಂದರೆ ಸರಿ. ಆ ಪ್ರಕಾರ, ವಿ ಪಿ ಸಿ ನಂ. 589 ನಮ್ಮ ಸ್ವಾಧೀನಲ್ಲಿ ಮತ್ತು 590 ಚನ್ನಮಲ್ಲಯ್ಯ ರವರ ಸ್ವಾಧೀನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಎರಡೂ ಆಸ್ತಿಗಳು ನಮ್ಮ ಸ್ವಾಧೀನದಲ್ಲಿಯೇ ಇವೆ. ಸದರಿ ಎರಡೂ ಆಸ್ತಿಗಳು ನಮ್ಮ ಸ್ವಾಧೀನದಲ್ಲಿ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ. 05-10-1993 ಚನ್ನಮಲ್ಲಯ್ಯರವರು ವಿ ಪಿ ಸಿ ನಂ.590 ರಲ್ಲಿ 25x25 ಅಡಿ ಆಸ್ತಿಯ ಕುರಿತು ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಹಕ್ಕುಬಿಟ್ಟ ಪತ್ರ ನೋಂದ ಆಗಿರುವುದಿಲ್ಲ. ಚನ್ನಮಲ್ಲಯ್ಯ ಹಕ್ಕುಬಿಟ್ಟ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಚನ್ನಮಲ್ಲಯ್ಯರವರು ದಾವಾ ಆಸ್ತಿಯ ಕುರಿತು ಯಾವುದೇ ಹಕ್ಕುಬಿಟ್ಟು ಕೊಡದೆ ಇದ್ದರೂ, ಪಂಚಾಯತಿ ಅಧಿಕಾರಿಗಳೊಂದಿಗೆ ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನಮ್ಮ ಹೆಸರು ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಕ್ಕುಬಿಟ್ಟುಕೊಟ್ಟ ಪತ್ರದ ಪ್ರಕಾರ ವರದಿಯನ್ನು ಸಲ್ಲಿಸಿರುತ್ತೇವೆ ಹಾಗೂ ಆ ಪ್ರಕಾರ ಪಂಚಾಯತಿಯವರು ಠರಾವು ಜಾರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ

ಕುಟುಂಬ ಮತ್ತು ನಮ್ಮ ಕುಟುಂಬ ಬೇರೆ ಬೇರೆ ಆಗಿರುವುದರಿಂದ, ಹಕ್ಕು ಬಿಟ್ಟ ಪತ್ರ ಬರೆದುಕೊಡಲು, ಕಾನೂನಿನಲ್ಲಿ ಅವಕಾಶ ಇಲ್ಲ ಎಂದರೆ ಸರಿಯಲ್ಲ. ಚೆನ್ನಮಲ್ಲಯ್ಯ ಮೃತ ಪಟ್ಟ ನಂತರ,ದಾವೆ ಸಲ್ಲಿಸುವವರೆಗೂ ವಾದಿಯರೇ ದಾವಾ ಆಸ್ತಿಯ ಕಬ್ಜಾ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರೇ ದಾವಾ ಆಸ್ತಿಯಲ್ಲಿ ಟ್ರ್ಯಾಕ್ಟರ್ , ಕೃಷಿ ಉಪಕರಣಗಳನ್ನು ಇಡುವ ಮೂಲಕ ಉಪಯೋಗ ಮಾಡಿಕೊಳ್ಳುತ್ತಿದರು ಎಂದರೆ ಸರಿಯಲ್ಲ.

ದಾವಾ ಸಲ್ಲಿಸುವ 6 ತಿಂಗಳ ಮುಂಚೆಯಿಂದ ನಾವು ವಾದಿಯರ ದಾವಾ ಆಸ್ತಿಯ ಸ್ವಾಧೀನಕ್ಕೆ ತಕರಾರು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಆಸ್ತಿ ಮತ್ತು ದಾವಾ ಆಸ್ತಿ ಬೇರೆ ಬೇರೆ ಆಗಿದ್ದು, ಆ ಬಗ್ಗೆ ತಮ್ಮ ಸ್ವಾ ದೀನಕ್ಕೆ ತೊಂದರೆ ಮಾಡಬಾರದು ಎಂದು ವಾದಿಯರು 3-4 ಬಾರಿ ಹಿರಿಯರ ಮೂಲಕ ನಮ್ಮನ್ನು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯರೇ ಸಂಪೂರ್ಣ ಮಾಲೀಕರು ಆಗಿದ್ದು, ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ತೊಂದರೆನೀಡುವ ಉದ್ದೇಶದಿಂದ ಅವರ ಸ್ವಾಧೀನಕ್ಕೆ ತಕರಾರು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಪಂಚಾಯತಿ ಅಧಿಕಾರಿಗಳೊಂದಿಗೆ ಸೇರಿ ದಾವಾಆಸ್ತಿಗಳ ಕುರಿತು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಪ್ರ ದ ನ್ಯಾಯಾಧೀಶರು, ನರಗುಂದ